ಒ.ಎಸ್. - 34/2020

ಪಿ.ಡಬ್ಲ್ಯು - 01

**ದಿನಾಂಕ 24-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು - 1 ಮತ್ತು 6 ನೇ ಪ್ರತಿವಾದಿಯರ ಪರ ವಕೀಲರಿಂದಃ**

06-08-2019 ರಂದು ಆಕ್ಸಿಸ್ ಬ್ಯಾಂಕ್ ನ ಎಫ್ ಡಿ ಮೊತ್ತ 77077 ರೂ ಗಳು ನನ್ನ ಖಾತೆಗೆ ಜಮೆ ಆಗಿದೆ ಎಂದರೆ ಗೊತ್ತಿಲ್ಲ . ಕಪ್ಪೆಟ್ಟು ಜನಾರ್ಧನ ನಾಯ್ಕ್ ರವರ ಜೊತೆ ನನ್ನ ವ್ಯವಹಾರ ಇಲ್ಲ . ಆದರೇ ಅವರ ಪರಿಚಯ ಇರುತ್ತದೆ. 2024 ರಲ್ಲಿ ಕಪ್ಪೆಟ್ಟು ಜನಾರ್ಧನ ನಾಯ್ಕ್ ನನ್ನ ಕೆನರಾ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡುತಿದ್ದರು ಎಂದರೆ ನೆನಪಿಲ್ಲ. ಕಪ್ಪೆಟ್ಟು ಜನಾರ್ಧನ ನಾಯ್ಕ್ ಯಾವ ಕಾರಣಕ್ಕಾಗಿ ನನ್ನ ಖಾತೆಗೆ ಹಣ ಜಮೆ ಮಾಡಿದರು ಎಂದು ನೆನಪಿಲ್ಲ. ಕಪ್ಪೆಟ್ಟು ಜನಾರ್ಧನ ನಾಯ್ಕ್ ರವರು ಆಗಿದಾಗ್ಗೆ ನನ್ನ ಖಾತೆಗೆ ಹಣ ಜಮೆ ಮಾಡಿದ ಉದ್ದೇಶ ಏನು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೆನಪಿಲ್ಲ ಎಂದು ತಿಳಿಸಿರುತ್ತಾರೆ . ಸುರೇಶ್ ಎನ್ನುವರು ಕೂಡ ನನ್ನ ಖಾತೆಗೆ ಆಗಾಗ್ಗೆ ಹಣ ಜಮೆ ಮಾಡುತಿದ್ದರು ಎಂದರೆ ನೆನಪಿಲ್ಲ . ರಾಜೇಶ್ , ಸತೀಶ್ , ಉಮೇಶ್ ರವರು ಕೂಡ ಹಲವಾರು ಬಾರಿ ನನ್ನ ಖಾತೆಗೆ 2024-25 ರಲ್ಲಿ ಹಣ ಜಮೆ ಮಾಡಿರುತ್ತಾರೆ ಎಂದರೆ ನೆನಪಿಲ್ಲ . ಕುಂಜಿಬೆಟ್ಟುವಿನ ಕೆನರಾ ಬ್ಯಾಂಕ್ ನಲ್ಲಿ ಇರುವ ನನ್ನ ಖಾತೆ ಈಗಲೂ ಕೂಡ ಚಲಾವಣೆಯಲ್ಲಿ ಇದೆ . ಆ ಬ್ಯಾಂಕಿನ ಪಾಸ್‌ಬುಕ್ ನನ್ನ ಬಳಿ ಇದೆ . ನಾನು ಪಾಸ್ ಬುಕ್ ನೋಡಿ 2 ವರ್ಷ ಆಗಿರುತ್ತದೆ. ನಾನು ಸದ್ರಿ ಕೆನರಾ ಬ್ಯಾಂಕ್ ನಲ್ಲಿ 2 ವರ್ಷಗಳಿಂದ ಹಣದ ವ್ಯವಹಾರ ಮಾಡಿರಬಹುದು ಸರಿಯಾಗಿ ನೆನಪಿಲ್ಲ . 2 ವರ್ಷಗಳಿಂದ ನನ್ನ ಖಾತೆಯಿಂದ ಬೇರೆಯವರ ಖಾತೆಗೆ ಹಣ ಹೋಗಿರುವುದು ಕಂಡುಬರುತದೆಯಾ ಇಲ್ಲವಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ನನ್ನ ಪಾಸ್ ಬುಕ್ ನ ಎಂಟ್ರಿಯನ್ನೇ ನೋಡಿಲ್ಲ ಎಂದು ತಿಳಿಸಿರುತಾರೆ . ನಾನು ನನ್ನ ವ್ಯವಹಾರವನ್ನು ಗೂಗಲ್ ಪೇ ಮುಖೇನ ಮಾಡುತ್ತೇನೆ. ನಾನು ಗೂಗಲ್ ಪೇ ವ್ಯವಹಾರದ ಸ್ಟೇಟ್‌ಮೆಂಟ್ ನ್ನು ನೋಡಿಲ್ಲ. ನಾನು ಕ್ರಿಕೆಟ್ ಬೆಟ್ಟಿಂಗ್ ಆಡುತ್ತೇನೆ ಎಂದರೆ ಸರಿಯಲ್ಲ. ನಾನು ಗ್ಯಾಂಬ್ಲಿಂಗ್

ಮಾಡುತ್ತೇನೆ ಎಂದರೆ ಸರಿಯಲ್ಲ. ಈ ವ್ಯವಹಾರಕ್ಕೆ ಸಂಬಂದಪಟ್ಟಂತೆ ಹಣದ ವ್ಯವಹಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಅಕ್ಕ ವಿಜಯಲಕ್ಷ್ಮೀ ಮನೆಯವರಿಗೆ ತಿಳಿಸದೇ ದಿ.09-03-1987 ರಂದು ಪ್ರೇಮ ವಿವಾಹ ಆದರು ಎಂದರೆ ನನಗೆ ಗೊತ್ತಿಲ್ಲ . ನನ್ನ ಅಕ್ಕ ವಿಜಯಲಕ್ಷ್ಮೀ ಮದುವೆ ಆಗಿದಾಗಿನಿಂದ ಅವರ ಗಂಡನ ಜೊತೆ ಪ್ರತ್ಯೇಕವಾಗಿ ವಾಸವಾಗಿದ್ದಾರೆ ಎಂದರೆ ಸರಿ . ನನ್ನ ಮತ್ತೊಬ್ಬ ಸಹೋದರಿ ವಿನಯ ಮದುವೆ ಆಗಿ ಹೈದಾರಬಾದ್ ನಲ್ಲಿ ಅವರ ಗಂಡನ ಜೊತೆ ವಾಸವಾಗಿದ್ದಾರೆ ಎಂದರೆ ಸರಿ . ಅವರಿಗೂ ಕೂಡ ಮದುವೆಯ ಸಮಯದಲ್ಲಿ ಸಾಕಷ್ಟು ಬಿನ್ನಾಭರಣ ಹಾಕಿ ಕೊಟ್ಟು ಮದುವೆ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ . ನನ್ನ ಅಣ್ಣ 1 ನೇ ಪ್ರತಿವಾದಿ 2014 ರಲ್ಲಿ ಆಯಿತು ಎಂದರೆ ಸರಿ . ನನ್ನ ಅಣ್ಣ 1 ನೇ ಪ್ರತಿವಾದಿ ಮದುವೆಯಾಗಿನಿಂದ ಮಂಗಳೂರಿನಲ್ಲಿ ಹೆಂಡತಿಯ ಜೊತೆ ವಾಸವಾಗಿದ್ದಾರೆ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ಒಂದು ದಿನ ಮಂಗಳೂರಿನಲ್ಲಿ ಇದ್ದರೇ 6 ದಿನ ಉಡುಪಿಯಲ್ಲಿ ಇರುತಿದ್ದರು . 2020 ರಿಂದ ನನ್ನ ಅಣ್ಣ 1 ನೇ ಪ್ರತಿವಾದಿ ಮತ್ತು ಅವರ ಹೆಂಡತಿ ಅವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿ ನನಗೆ ನಿಗದಿತವಾಗಿ ಗೊತ್ತಿಲ್ಲ ಆದರೇ ಹೇಳುವುದನ್ನು ಕೇಳಿದ್ದೇನೆ ಎಂದು ತಿಳಿಸಿರುತಾರೆ . ನನ್ನ ಅಣ್ಣ 1 ನೇ ಪ್ರತಿವಾದಿ ಮದುವೆಯಾಗುವ ಸಮಯದಲ್ಲಿ ಅವರ ಹೆಂಡತಿ ಮಂಗಳೂರಿನ ಎಜೆ ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞರಾಗಿ ಕೆಲಸ ಮಾಡುತಿದ್ದರು ಎಂದರೆ ಸರಿ. ನಂತರ ಈಗ ಬೆಂಗಳೂರಿನ ಬೋರಿಂಗ್ ಆಸ್ಪತ್ರೆಯಲ್ಲಿ ಅರವಳಿಕೆ ತಜ್ಞೆಯಾಗಿ ಕೆಲಸ ಮಾಡುತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . 2017 ರಲ್ಲಿ ನನ್ನ ಅಣ್ಣ 1 ನೇ ಪ್ರತಿವಾದಿಯ ಹೆಂಡತಿಗೆ ಮೊಬೈಲ್ ಮುಖೇನ ಕರೆ ಮಾಡಿ " ನನ್ನ ಅಣ್ಣ 1 ನೇ ಪ್ರತಿವಾದಿಯ ವಿರುದ್ಧ ಕೆಟ್ಟದಾಗಿ ಬಿಂಬಿಸಲು ನನ್ನ ಅಣ್ಣ 1 ನೇ ಪ್ರತಿವಾದಿ ಸರಿ ಇರುವುದಿಲ್ಲ ಎಂದುಹೇಳಿರುತ್ತೇನೆ ಎಂದರೆ ಸರಿಯಲ್ಲ " . ನಾನು ಫೋನಿನಲ್ಲಿ ಶಸ್ತ್ರ ಗಳನ್ನು ಬದಿಗೆ ಇಟ್ಟಿದ್ದೇವೆ ಅದನ್ನು ಹೇಗೆ ಉಪಯೋಗಿಸಬೇಕು ಎಂದು ಗೊತ್ತು ಎಂದು ಹೇಳಿದೆ ಎಂದರೆ ಸರಿಯಲ್ಲ . ಸದ್ರಿ Voice record ನನ್ನ ಅಣ್ಣ 1 ನೇ

ಪ್ರತಿವಾದಿ ನ್ಯಾಯಲಯಕ್ಕೆ ಹಾಜರುಪಡಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ಸಾಕ್ಷಿ ಮುಂದುವರಿದು ನನ್ನ ಅಣ್ಣ 1 ನೇ ಪ್ರತಿವಾದಿ ಆತನ ಹೆಂಡತಿ ಜೊತೆ ಸರಿ ಇಲ್ಲದೇ ಇದ್ದಾಗ ವೈಮನಸ್ಸಿನಿಂದ ಇದ್ದಾಗ ನನ್ನ ಮೊಬೈಲ್ ನ್ನು ತೆಗೆದುಕೊಂಡು ನನ್ನ ಅಣ್ಣ 1 ನೇ ಪ್ರತಿವಾದಿ ಅವನ ಹೆಂಡತಿಗೆ Voice message ಕಳುಹಿಸುವುದು ಮತ್ತು Whatsapp message ಮಾಡುತಿದ್ದರು, ಆತನ ಹೆಂಡತಿ ನಾನು ಕಳುಹಿಸಿದ್ದೇನೆ ಎಂದು ತಿಳಿದುಕೊಳ್ಳುತಿದ್ದರು . ನಾನು ಸಂದೇಶ ಕಳುಹಿಸಿಲ್ಲ ಎಂದು ನನ್ನ ಅಣ್ಣ 1 ನೇ ಪ್ರತಿವಾದಿಯ ಹೆಂಡತಿಗೆ ಹೇಳಲು ಆಗಲಿಲ್ಲ, ಕಾರಣ ಆಕೆ ಉಡುಪಿಗೆ ಎಂದೂ ಕೂಡ ಬರುತಿರಲಿಲ್ಲ ಆಗೊಮ್ಮೆ ಈಗಮ್ಮೆ ಬರುತಿದ್ದರು ಆಗ ಮಾತನಾಡುವ ಅವಕಾಶ ಸಿಗುತಿರಲಿಲ್ಲ ಎಂದು ತಿಳಿಸಿರುತ್ತಾರೆ. ಮುಂದುವರಿದು ನನ್ನ ಅಣ್ಣ 1 ನೇ ಪ್ರತಿವಾದಿ ಮಾತನಾಡಲು ಬಿಡುತಿರಲಿಲ್ಲ ಎಂದು ತಿಳಿಸಿರುತ್ತಾರೆ . ನನ್ನ ಅಣ್ಣ 1 ನೇ ಪ್ರತಿವಾದಿ ಹೆಂಡತಿ ಸುಸಂಕೃತರು ಮತ್ತು ಒಳ್ಳೆಯವರು ಎಂದರೆ ಸರಿ ಮತ್ತು ಅವರು ಒಳ್ಳೆಯ ಮನೆತನದಿಂದ ಬಂದಿರುತಾರೆ ಎಂದರೆ ಸರಿ . ವಿಜಯಲಕ್ಮೀ ಗಂಡನಿಗೆ ಬಹಳಷ್ಟು ಸಾಲ ಇತ್ತು ಎಂದರೆ ನನಗೆ ಗೊತ್ತಿಲ್ಲ . ಆಕೆಗೆ ಒಂದನೇ ಪ್ರತಿವಾದಿ 1 ಕೋಟಿ 3 ಲಕ್ಷ ಹಣ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆ ಬದುಕಿದ್ದಾಗ ವಿಜಯಲಕ್ಮೀಗೆ ಕೊಡಲು ಎಂದು ದಶರಥ ನಗರದಲ್ಲಿ ಒಂದು ಮನೆ ಕಟ್ಟಿದ್ದರು , ನನ್ನ ಅಣ್ಣ ಸದ್ರಿ ಮನೆಯನ್ನು ಮಾರಾಟ ಮಾಡಿ ದುಡ್ಡನ್ನು ಇಟ್ಟುಕೊಂಡಿದ್ದರು ನಂತರ ವಿಜಯಲಕ್ಮೀ ಹಣ ಕೇಳಿದಾಗ ನನ್ನ ಅಣ್ಣ 17 ವರ್ಷ ಬಿಟ್ಟು ಆಕೆಗೆ ಆ ಹಣ ಕೊಟ್ಟಿರುತ್ತಾರೆ . ದಶರಥ ನಗರದ ಆಸ್ತಿ ಬಗ್ಗೆ ದಾಖಲೆ ಕೊಟ್ಟಿರುತ್ತೇನೆ . ಸದ್ರಿ ಮನೆ ಯಾರ ಹೆಸರಿನಲ್ಲಿ ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಲ್ಲವನ್ನು ನನ್ನ ಅಣ್ಣನೇ ನೋಡಿಕೊಳ್ಳುತಿದ್ದರು ಎಂದು ತಿಳಿಸಿರುತ್ತಾರೆ ಮತ್ತು ಯಾರ ಹೆಸರಿನಲ್ಲಿ ಇತ್ತು ಎಂದು ದಾಖಲೆ ನೋಡಿ ಹೇಳಬೇಕು. 1 ಕೋಟಿ 3 ಲಕ್ಷ ಹಣ ಕುಟುಂಬಕ್ಕೆ ಸಂಬಂದಪಟ್ಟ ಹಣವಾಗಿರುತ್ತದೆ . ಸದ್ರಿ 1 ಕೋಟಿ 3 ಲಕ್ಷ ಹಣ ಕೂಡ ಪಾಲು ಆಗಲು ಇರುವಂತಹ ಹಣವಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನೋಡಬೇಕು ಎಂದು ತಿಳಿಸಿರುತಾರೆ. ವಿಜಯಲಕ್ಮೀ ಪಾಲಿಗೆ ಕೊಟ್ಟಂತಹ ಹಣ

ಎಂದು ನಮ್ಮ ದಾವೆಯಲ್ಲಿ ಬರೆದಿಲ್ಲ . 1 ಕೋಟಿ 3 ಲಕ್ಷ ವಿಜಯಲಕ್ಮೀ ಗಂಡನಿಗೆ ನನ್ನ ಅಣ್ಣ ಸಾಲವಾಗಿ ಕೊಟ್ಟಿದ್ದು ಸದ್ರಿ ಹಣವನ್ನು ನನ್ನ ಅಣ್ಣ ವಾಪಸ್ಸು ಕೇಳಿದಾಗ ವಿಜಯಲಕ್ಮೀ ಮತ್ತು ಅವರ ಗಂಡ ನನ್ನ ಮತ್ತು ಇತರ ಪ್ರತಿವಾದಿಗಳ ಮುಖಾಂತರ ಈ ದಾವೆಯನ್ನು ಹಾಕಿಸಿರುತ್ತಾರೆ ಎಂದರೆ ಸರಿಯಲ್ಲ. 1 ಕೋಟಿ 3 ಲಕ್ಷ ಹಣವಲ್ಲದೇ ಒಂದನೇ ಪ್ರತಿವಾದಿಯಾದ ನನ್ನ ಅಣ್ಣ ನನ್ನ ಅಕ್ಕ ವಿಜಯಲಕ್ಮೀ ಗೆ 67 ಲಕ್ಷ ಹಣ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ . ನನ್ನ ತಂದೆಗೆ ಚೆನ್ನಾಯಿನ ಮೆಡ್ರಾಸ್ ಮೆಡಿಕಲ್ ಮಿಷನ್ ಆಸ್ಪತ್ರೆಯಲ್ಲಿ ಬೈಪಾಸ್ ಸರ್ಜರಿ ಆಗಿತ್ತು ಎಂದರೆ ಸರಿ. ಆ ಸಮಯದಲ್ಲಿ ನನ್ನ ಅಣ್ಣ ಎಂಬಿಬಿಎಸ್ ಅಂತಿಮ ವರ್ಷದ ವಿದ್ಯಾರ್ಥಿಯಾಗಿದ್ದರು ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ಅವರು ಮನೆಯಲ್ಲಿಯೇ ಇದ್ದರು . ನನ್ನ ಅಣ್ಣ ವಿದ್ಯಾಬ್ಯಾಸವನ್ನು ಬಿಟ್ಟು ನನ್ನ ತಂದೆಯನ್ನು ಚಿಕಿತ್ಸೆ ಗಾಗಿ ಚೆನ್ನಾಯಿನ ಮೆಡ್ರಾಸ್ ಮೆಡಿಕಲ್ ಮಿಷನ್ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಬೇರೆ ಹುಡಗರ ಜೊತೆ ತಿರುಗಾಡುತಿದ್ದರು ನಾನು ನನ್ನ ತಂದೆಯ ಜೊತೆ ಚೆನ್ನಾಯಿನ ಮೆಡ್ರಾಸ್ ಮೆಡಿಕಲ್ ಮಿಷನ್ ಆಸ್ಪತ್ರೆಗೆ ಹೋಗಿರುತ್ತೇನೆ, ಆಗಾಗ್ಗೆ ನನ್ನ ಅಣ್ಣ ಕೂಡ ಬರುತಿದ್ದರು ಎಂದು ತಿಳಿಸಿರುತಾರೆ . 1994 ರಲ್ಲಿ ನನಗೆ 18 ವರ್ಷ ವಯಸ್ಸು ಆಗಿತ್ತು . ಆ ಸಮಯದಲ್ಲಿ ನನ್ನ ಅಣ್ಣ ನನ್ನನ್ನು ನನ್ನ ಅಜ್ಜಿಯ ಆಸ್ತಿ ಇರುವ ಕಲ್ಲಡ್ಕ ಕೆ ಹೋಗಿ ಆಸ್ತಿ ನೋಡಿಕೊಳ್ಳುವಂತೆ ಹೇಳಿದ್ದರು ಆದರಿಂದ ನಾನು ವಿದ್ಯಾಬ್ಯಾಸ ಬಿಟ್ಟು ಕಲ್ಲಡ್ಕದ ಆಸ್ತಿಯನ್ನು ನಿರ್ವಹಣೆ ಮಾಡುತಿದ್ದೆ ಮತ್ತು ನಿರ್ವಹಣೆ ಮಾಡುತ್ತಾ ಉಡುಪಿಗೆ ಒಡಾಡುತಿದ್ದೆ ಎಂದು ತಿಳಿಸಿರುತಾರೆ . ಎಲ್ಲಾ ಶಾಲೆಯವರು ನನ್ನ ತಂದೆಯನ್ನು ಕರೆದು ನಿಮ್ಮ ಮಗನನ್ನು ಕರೆದುಕೊಂಡು ಹೋಗಿ ಎಂದು ನಿಮ್ಮ ಟಿಸಿ ಕೊಟ್ಟು ಕಳುಹಿಸಿದ್ದರು ಎಂದರೆ ಸರಿಯಲ್ಲ . ಆ ಕಾರಣದಿಂದನಾನು ವಿದ್ಯಾಬ್ಯಾಸ ಬಿಟ್ಟೆ ಎಂದರೆ ಸರಿಯಲ್ಲ . 2006 ನನಗೆ ಎಕ್ಸ್ ರೇ ಮಾಡುತಿದ್ದಾಗ ಲ್ಯಾಬ್ ಟೆಕ್ನಿಶಿಯನ್ ತಪ್ಪಿನಿಂದ ಹೆಚ್ಚಿನ ಕ್ಷಾ ಕಿರಣಗಳನ್ನು ನನ್ನ ಮೈ ಗೆ ಬಿಟ್ಟಿದ್ದರಿಂದ ಸ್ವಲ್ಪ ಆರೋಗ್ಯದಲ್ಲಿ ಏರುಪೇರು ಆಯಿತು ಅದು ನಂತರ ಸರಿ ಆಯಿತು . ವೆಲ್ಲೂರು ಆಸ್ಪತ್ರೆಗೆ ನನ್ನ

ಅಣ್ಣ ನನ್ನನ್ನು ಚಿಕಿತ್ಸೆ ಗಾಗಿ ಕರೆದುಕೊಂಡು ಹೋಗಿದ್ದರು ಎಂದರೆ ಸಾಕ್ಷಿ ಜೊತೆಯಲ್ಲಿ ಬಂದಿದ್ದರು ನಾನು ಆಗಲೂ ಕೂಡ ಈಗಿನ ರೀತಿಯೇ ಒಡಾಡುತಿದ್ದೆ ಎಂದು ತಿಳಿಸಿರುತ್ತಾರೆ . ಡಾ ಪ್ರಮೀನ್ ಚೆರಿಯಾ ನನಗೆ ಗೊತ್ತಿಲ್ಲ . ಅವರ ಜೊತೆ ನಾನು ಕೇರಳದವರೆಗೆ ಹೋಗಿದ್ದೆ ಎಂದರೆ ಸರಿಯಲ್ಲ. ಅವರು ನನ್ನ ಅಣ್ಣನ ಮಿತ್ರ ಎಂದರೆ ನನಗೆ ಗೊತ್ತಿಲ್ಲ . ನಾನು ಎಷ್ಟು ವರ್ಷಗಳವರೆಗೆ livac tablet ನ್ನು ತೆಗೆದುಕೊಳ್ಳುತಿದ್ದೆ ಎಂದು ನೆನಪಿಲ್ಲ, ಆದರೇ ಮೊದಲು ಅದನ್ನು ತೆಗೆದುಕೊಂಡಿದ್ದೆ . ಅದನ್ನು ನನ್ನ ಅಣ್ಣ ಸದ್ರಿ ಡಾ ಪ್ರಮೀನ್ ಚೆರಿಯಾ ಮುಖಾಂತರ ನನಗೆ ಉಚಿತವಾಗಿ ಕೊಡಿಸಿದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅದಕ್ಕಾಗಿ ಒಂದು ಸಂಸ್ಥೆ ಇದ್ದು ಸದ್ರಿ ಸಂಸ್ಥೆಯವರು ನಮ್ಮ ಆದಾಯ ತೆರಿಗೆ ರಿಟನ್ಸ್ ನೋಡಿ ಕಡಿಮೆ ಇದ್ದುದರಿಂದ ಉಚಿತವಾಗಿ ಆ ಮಾತ್ರೆಗಳನ್ನು ಕೊಟ್ಟಿರುತಾರೆ .

ನನ್ನ ತಾಯಿ ಎಜೆ ಆಸ್ಪತ್ರೆಯಲ್ಲಿ 2016 ರಲ್ಲಿ Heart wall replacement ಗೆ ಚಿಕಿತ್ಸೆಗಾಗಿ ದಾಖಲಾಗಿದ್ದರು ಎಂದರೆ ಸರಿ . ಮತ್ತು ಅವರಿಗೆ ಸರ್ಜರಿ ಆಯಿತು ಎಂದರೆ ಸರಿ. ನನ್ನ ತಾಯಿಗೆ ವೈಧ್ಯಕೀಯ ವೆಚ್ಚ ಎಷ್ಟು ಖರ್ಚಾಯಿತು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಗೆ ವೈಧ್ಯಕೀಯ ವೆಚ್ಚ ಸುಮಾರು 14.5 ಲಕ್ಷ ಖರ್ಚಾಗಿದ್ದು ಅದನ್ನು ಒಂದನೇ ಪ್ರತಿವಾದಿಯಾದ ನನ್ನ ಅಣ್ಣ ಸಂಪೂರ್ಣವಾಗಿ ಬರಿಸಿರುತಾರೆ ಎಂದರೆ ಸಾಕ್ಷಿ ನನ್ನ ತಂದೆಗೆ ಇನ್ಸುರೆನ್ಸ್ ಇತ್ತು ಅದನ್ನು ಕ್ಲೇಮ್ ಮಾಡಿ ನನ್ನ ಅಣ್ಣ ಪಡೆದಿರುತಾರೆ . ನನ್ನ ತಾಯಿಗೆ ಸದ್ರಿ ಇನ್ಸುರೆನ್ಸ್ ಹಣ ಎಷ್ಟು ಬಂತು ಎಂದು ನನಗೆ ಗೊತ್ತಿಲ್ಲ. ಇನ್ಸುರೆನ್ಸ್ ಹಣ ಕೇವಲ 5 ಲಕ್ಷ ಮಾತ್ರ ಇತ್ತು ಎಂದರೆ ನನಗೆ ಗೊತ್ತಿಲ್ಲ . ನಿಮ್ಮ ತಾಯಿಯ ಚಿಕಿತ್ಸೆ ಗೆ ನೀವು ಹಣ ಖರ್ಚು ಮಾಡಿದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅದು ಕುಟುಂಬದ ಹಣ ಅದನ್ನೇ ನನ್ನ ಅಣ್ಣ ಖರ್ಚು ಮಾಡಿರುತೇನೆ ಎಂದು ತಿಳಿಸಿರುತಾರೆ. ನಮ್ಮ ಕುಟುಂಬದ ಹಣ ಎಷ್ಟು ಅದಕ್ಕಾಗಿ ಖರ್ಚಾಗಿದೆ ಎಂದು ನನಗೆ ಗೊತ್ತಿಲ್ಲ . ನಮ್ಮ ಕುಟುಂಬದ ಹಣದಿಂದ ನನ್ನ ತಾಯಿಯ ಚಿಕಿತ್ಸೆಗಾಗಿ ಹಣ ಖರ್ಚು ಮಾಡಲಾಗಿದೆಎಂದು ತೋರಿಸಲು ದಾಖಲೆ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಹಣ ಕೊಟ್ಟಿರುವುದೇ ದಾಖಲೆ ಎಂದು ತಿಳಿಸಿರುತಾರೆ . 2016 ರಲ್ಲಿ

ಕುಟುಂಬದ ಹಣ ಎಷ್ಟು ಇತ್ತು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಶೇರ್ ನಲ್ಲಿ ಲಕ್ಷಗಟ್ಟಲೇ ಹಣ ಇತ್ತು ಆದರೇ ನಾನು ನೋಡಿರುವುದಿಲ್ಲ. ನನ್ನ ಹೆಸರಿನಲ್ಲಿ , ನನ್ನ ತಮ್ಮನ ಹೆಸರಿನಲ್ಲಿ ಕೋಟಿಗಟ್ಟಲೇ ಮೌಲ್ಯದ ಶೇರ್ ಗಳು ಇತ್ತು ಅದನ್ನು ನನ್ನ ಅಣ್ಣ ನಮ್ಮ ಸಹಿ ಪಡೆದು ಆತನಿಗೆ 2017 ರಲ್ಲಿ ವರ್ಗಾಹಿಸಿಕೊಂಡಿದ್ದಾನೆ . ಡಿ ಮ್ಯಾಟ್ ಖಾತೆಯಲ್ಲಿ ಕೋಟಿಗಟ್ಟಲೇ ಮೌಲ್ಯದ ಶೇರ್ ಗಳು ಕಂಡುಬರುತದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಾನು ಡಿಮ್ಯಾಟ್ ಖಾತೆಯನ್ನೇ ನೋಡಿಲ್ಲ ನನ್ನ ಅಣ್ಣ ಸಹಿ ಮಾತ್ರ ಪಡೆಯುತಿದ್ದರು ಎಂದು ತಿಳಿಸಿರುತ್ತಾರೆ . ನನ್ನ ಅಣ್ಣ ಕೆಲವು ಫಾರಂಗಳಿಗೆ ಸಹಿ ಪಡೆದು ಅವನ ಹೆಸರಿಗೆ ಶೇರ್ ಗಳನ್ನು ವರ್ಗಾಹಿಸಿಕೊಂಡಿರುತಾನೆ . ಆಗ ನಾನು ಯಾವ ಶೇರ್ ಗಳು ಇದ್ದವು ಎಂದು ನೋಡಿಲ್ಲ . ನಾನು ಕತ್ತಲೆಯಲ್ಲಿ ಇದ್ದೆ . ನನ್ನ ಅಣ್ಣ ಕೋಟಿಗಟ್ಟಲೇ ಮೌಲ್ಯದ ಶೇರ್ ಗಳನ್ನು ವರ್ಗಾವಣೆ ಮಾಡಿಸಿಕೊಂಡರು ಎಂದು ನನ್ನ ವಾದಪತ್ರದಲ್ಲಿ ತಿಳಿಸಿಲ್ಲ. ಸದ್ರಿ ಶೇರ್ ಗಳು ಪಾಲು ಆಗಬೇಕು ಎಂದು ನಾನು ಈ ದಾವೆಯಲ್ಲಿ ಕೇಳಿಲ್ಲ . ಆದರೇ ಎಷ್ಟು ಶೇರ್ ಗಳು ಇದೆ ಎಂಬ ಬಗ್ಗೆ ನಮೂದು ಮಾಡಿದ್ದೇವೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸ ಇದೆ ಎಂದು ಒಪ್ಪಿದರು

ಪ್ರ. ಹಿ. ಸಿ. ನ್ಯಾ ಉಡುಪಿ.

ಒ.ಎಸ್.  - 34/2020

ಪಿ.ಡಬ್ಲ್ಯು - 01